**All India Radio: Bangalore**
**National Bulletins In Kannada**
**06.08.2025 / 7.35 am**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**06.08.2025 / 7.35 am**
**<><*<><>*><>**

**ಮುಖ್ಯಾಂಶಗಳು**

೧. ಉತ್ತರಕಾಶಿಯಲ್ಲಿ ಮೇಘಸ್ಫೋಟ; ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿ

೨. ನವದೆಹಲಿಯ ಕರ್ತವ್ಯಪಥದಲ್ಲಿ ನೂತನ ಕರ್ತವ್ಯ ಭವನವನ್ನು ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

೩. ಸಶಸ್ತ್ರ ಪಡೆಗಳನ್ನು ಬಲಪಡಿಸಲು ೬೭ ಸಾವಿರ ಕೋಟಿ ರೂಪಾಯಿ ಮೌಲ್ಯದ ಮಿಲಿಟರಿ ಹಾರ್ಡ್‌ವೇರ್‌ಗೆ ಅನುಮೋದನೆ ನೀಡಿದ ರಕ್ಷಣಾ ಸಚಿವಾಲಯ

೪. ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಮೆಂಟ್‌ನ ಮೂರನೇ ಆವೃತ್ತಿಗೆ ಇಂದು ಚಾಲನೆ

**<><*<><>*><>**

ಖೀರ್ ಗಂಗಾ ನದಿಯ ಮೇಲ್ಭಾಗದ ಜಲಾನಯನ ಪ್ರದೇಶದಲ್ಲಿ ಮೇಘಸ್ಫೋಟದಿಂದ ಉಂಟಾದ ಭೀಕರ ಪ್ರವಾಹ ಉತ್ತರಕಾಶಿ ಜಿಲ್ಲೆಯ ಧರಾಲಿ ಗ್ರಾಮದಲ್ಲಿ ದೊಡ್ಡ ಪ್ರಮಾಣದ ನಷ್ಟವನ್ನುಂಟುಮಾಡಿದೆ. ಮೇಘಸ್ಫೋಟದ ನಂತರ, ಖೀರ್ ಗಂಗಾ ನದಿ ಹಠಾತ್ತನೆ ಉಕ್ಕಿ ಹರಿದಿದ್ದು, ವ್ಯಾಪಕ ಹಾನಿಯಾಗಿದೆ. ಪ್ರಾಥಮಿಕ ವರದಿಗಳ ಆಧಾರದ ಮೇಲೆ, ಕನಿಷ್ಠ ನಾಲ್ಕು ಜನರು ಪ್ರಾಣ ಕಳೆದುಕೊಂಡಿದ್ದು, ಹಲವರು ಕಾಣೆಯಾಗಿದ್ದಾರೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಪ್ರಶಾಂತ್ ಆರ್ಯ ಹೇಳಿದ್ದಾರೆ. ಸೇನೆ, ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್, ಜಿಲ್ಲಾಡಳಿತ ಮತ್ತು ಇತರ ಸಂಬಂಧಪಟ್ಟ ತಂಡಗಳ ಸಹಾಯದಿಂದ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಸಮರೋಪಾದಿಯಲ್ಲಿ ನಡೆಸಲಾಗುತ್ತಿದೆ. ಆಕಾಶವಾಣಿಯೊಂದಿಗೆ ಮಾತನಾಡಿದ ವಿಪತ್ತು ನಿರ್ವಹಣಾ ಕಾರ್ಯದರ್ಶಿ ವಿನೋದ್ ಕುಮಾರ್, ಆಡಳಿತ ಸಂಪೂರ್ಣ ಜಾಗರೂಕವಾಗಿದೆ ಮತ್ತು ಬಾಧಿತ ನಾಗರಿಕರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು. ಮೇಘಸ್ಫೋಟ ಸಂಭವಿಸಿರುವ ಉತ್ತರಕಾಶಿ ಜಿಲ್ಲೆಯ ಧರಾಲಿ ಪ್ರದೇಶದಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲು, ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ವಿಶೇಷ ಘಟಕಗಳು ಸೇರಿದಂತೆ ೩೦೦ ಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯ ಕರ್ತವ್ಯ ಪಥದಲ್ಲಿ ನಿರ್ಮಾಣಗೊಂಡಿರುವ ನೂತನ ಕರ್ತವ್ಯ ಭವನವನ್ನು ಇಂದು ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಾರ್ವಜನಿಕ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಲಿದ್ದಾರೆ. ಕರ್ತವ್ಯ ಭವನ, ಸೆಂಟ್ರಲ್ ವಿಸ್ಟಾ ವಿಶಾಲ ಯೋಜನೆಯ ಭಾಗವಾಗಿದ್ದು, ಭವಿಷ್ಯದಲ್ಲಿ ನಿರ್ಮಾಣವಾಗಲಿರುವ ಅನೇಕ ಕೇಂದ್ರೀಯ ಕಟ್ಟಡಗಳಲ್ಲಿ ಮೊದಲನೆಯದಾಗಿದೆ. ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಸುಗಮಗೊಳಿಸಿ, ವೇಗದ ಮತ್ತು ಪರಿಣಾಮಕಾರಿ ಆಡಳಿತವನ್ನು ಸಾಧ್ಯವಾಗಿಸುವುದು ಇದರ ಉದ್ದೇಶವಾಗಿದೆ. ಕರ್ತವ್ಯ ಭವನ ದೆಹಲಿಯ ವಿವಿಧೆಡೆ ವ್ಯಾಪಿಸಿರುವ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳನ್ನು ಒಂದುಗೂಡಿಸುವ ಮೂಲಕ ಕಾರ್ಯಕ್ಷಮತೆ, ನಾವೀನ್ಯತೆ ಮತ್ತು ಸಹಕಾರವನ್ನು ಉತ್ತೇಜಿಸುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಪ್ರಧಾನಮಂತ್ರಿಗಳ ಕಚೇರಿ ತಿಳಿಸಿದೆ. ಸುಮಾರು ೧.೫ ಲಕ್ಷ ಚದರ ಮೀಟರ್ ಪ್ರದೇಶದಲ್ಲಿ ನಿರ್ಮಿತವಾಗಿರುವ ಈ ಆಧುನಿಕ ಕಚೇರಿ ಸಂಕೀರ್ಣ ಎರಡು ನೆಲಮಹಡಿ ಮತ್ತು ಏಳು ಮಹಡಿಗಳನ್ನು ಒಳಗೊಂಡಿದೆ.

**<><*<><>*><>**

ಭಾರತ-ಫಿಲಿಪೈನ್ಸ್ ಪಾಲುದಾರಿಕೆ, ಎರಡೂ ದೇಶಗಳ ಜನರಿಗೆ ಪ್ರಯೋಜನಕಾರಿ ಮಾತ್ರವಲ್ಲದೆ, ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ಆಧಾರವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದ್ದಾರೆ. ಭಾರತಕ್ಕೆ ತಮ್ಮ ಮೊದಲ ಅಧಿಕೃತ ಭೇಟಿ ನೀಡಿರುವ ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ರೊಮುವಾಲ್ಡೆಜ್ ಮಾರ್ಕೋಸ್ ಜೂನಿಯರ್ ಅವರನ್ನು

ಸ್ವಾಗತಿಸಿದ ರಾಷ್ಟ್ರಪತಿ, ಉಭಯ ರಾಷ್ಟ್ರಗಳ ನಡುವಿನ ವ್ಯಾಪಕ ಸಹಕಾರ, ಉನ್ನತ ಮಟ್ಟದ ಸೌಹಾರ್ದ ಸಂಬಂಧ, ಪ್ರವರ್ಧಮಾನಕ್ಕೆ ಬರುತ್ತಿರುವ ವ್ಯಾಪಾರ ಮತ್ತು ವಾಣಿಜ್ಯ, ಕಡಲ ಕ್ಷೇತ್ರ ಮತ್ತು ಅಭಿವೃದ್ಧಿ ಪಾಲುದಾರಿಕೆ ಸೇರಿದಂತೆ, ಬಲವಾದ ರಕ್ಷಣೆ ಮತ್ತು ಭದ್ರತಾ ಸಹಕಾರವನ್ನು ಒಳಗೊಂಡಿದೆ ಎಂದು ಹೇಳಿದರು. ದ್ವಿಪಕ್ಷೀಯ ಸಂಬಂಧಗಳನ್ನು 'ಕಾರ್ಯತಂತ್ರದ ಪಾಲುದಾರಿಕೆ'ಗೆ ಉನ್ನತೀಕರಿಸುವುದು, ಭಾರತ ಮತ್ತು ಫಿಲಿಪ್ಪೈನ್ಸ್ ನಡುವಿನ ಬಹುಮುಖಿ ಸಹಕಾರವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಅವರು ಒತ್ತಿ ಹೇಳಿದರು. ಪಹಲ್ಗಾಮ್‌ನಲ್ಲಿ ನಡೆದ ಘೋರ ಭಯೋತ್ಪಾದಕ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಕ್ಕಾಗಿ ಮತ್ತು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಬೆಂಬಲಕ್ಕಾಗಿ ಫಿಲಿಪ್ಪೈನ್ಸ್ ಸರ್ಕಾರಕ್ಕೆ ಅವರು ಧನ್ಯವಾದಗಳನ್ನು ಅರ್ಪಿಸಿದರು. ಸ್ಥಳೀಯ ಸಮುದಾಯಗಳಿಗೆ ನೆರವು ನೀಡುವ ಗುರಿ ಹೊಂದಿರುವ ಯೋಜನೆಗಳ ಅನುಷ್ಠಾನ ಸೇರಿದಂತೆ, ಫಿಲಿಪ್ಪೈನ್ಸ್‌ನೊಂದಿಗೆ ಅಭಿವೃದ್ಧಿ ಸಹಕಾರಕ್ಕೆ ಭಾರತದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು. ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ ೭೫ ನೇ ವಾರ್ಷಿಕೋತ್ಸವದ ಆಚರಣೆಗೆ ಪೂರಕವಾಗಿ, ಫಿಲಿಪ್ಪೈನ್ಸ್ ಅಧ್ಯಕ್ಷರ ಈ ಭೇಟಿಯು, ಭಾರತ ಮತ್ತು ಫಿಲಿಪ್ಪೈನ್ಸ್ ನಡುವೆ ಬಲವಾದ ಪಾಲುದಾರಿಕೆಯನ್ನು ನಿರ್ಮಿಸಲು ಸಹಾಯ ಮಾಡುತ್ತದೆ ಎಂದು ಉಭಯ ನಾಯಕರು ಸಮ್ಮತಿಸಿದರು. ಫಿಲಿಪ್ಪೈನ್ಸ್ ಅಧ್ಯಕ್ಷರ ಗೌರವಾರ್ಥವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಔತಣಕೂಟವನ್ನು ಆಯೋಜಿಸಿದ್ದರು.

**<><*<><>*><>**

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ರಕ್ಷಣಾ ಸ್ವಾಧೀನ ಮಂಡಳಿಯು ಸುಮಾರು ೬೭ ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಿಲಿಟರಿ ಹಾರ್ಡ್‌ವೇರ್ ಖರೀದಿಸಲು ವಿವಿಧ ಪ್ರಸ್ತಾವನೆಗಳನ್ನು ಅನುಮೋದಿಸಿದೆ. ಭಾರತೀಯ ಸೇನೆಯ ಬಿಎಂಪಿ ಫ್ಲೀಟ್‌ಗಾಗಿ ಥರ್ಮಲ್ ಇಮೇಜರ್ ಆಧಾರಿತ ಡ್ರೈವರ್ ನೈಟ್ ಸೈಟ್ ಖರೀದಿಗೆ ಅಗತ್ಯತೆಯ ಸ್ವೀಕಾರ (ಎಒಎನ್) ನೀಡಲಾಗಿದೆ. ಇದು ಬಿಎಂಪಿಗಳ ರಾತ್ರಿ ಚಾಲನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಹಾಗೂ ಯಾಂತ್ರಿಕೃತ ಪದಾತಿ ದಳದ ಕಾರ್ಯಾಚರಣೆಗೆ ಒತ್ತು ನೀಡುತ್ತದೆ. ಭಾರತೀಯ ನೌಕಾಪಡೆಗೆ, ಕಾಂಪ್ಯಾಕ್ಟ್ ಅಟಾನಮಸ್ ಸರ್ಫೇಸ್ ಕ್ರಾಫ್ಟ್, ಬ್ರಹ್ಮೋಸ್ ಫೈರ್ ಕಂಟ್ರೋಲ್ ಸಿಸ್ಟಮ್ ಮತ್ತು ಲಾಂಚರ್‌ಗಳ ಖರೀದಿ ಮತ್ತು ಬರಾಕ್-೧ ಪಾಯಿಂಟ್ ಡಿಫೆನ್ಸ್ ಕ್ಷಿಪಣಿ ವ್ಯವಸ್ಥೆಯ ನವೀಕರಣಕ್ಕಾಗಿ ಅವಕಾಶ ನೀಡಲಾಗಿದೆ. ಕಾಂಪ್ಯಾಕ್ಟ್ ಅಟಾನಮಸ್ ಸರ್ಫೇಸ್ ಕ್ರಾಫ್ಟ್‌ನ ಖರೀದಿಯು ನೌಕಾಪಡೆಗೆ ಜಲಾಂತರ್ಗಾಮಿ ವಿರೋಧಿ ಯುದ್ಧ ಕಾರ್ಯಾಚರಣೆಗಳಲ್ಲಿ ಆಕ್ರಮಣಗಳನ್ನು ಪತ್ತೆಹಚ್ಚಲು, ವರ್ಗೀಕರಿಸಲು ಮತ್ತು ತಟಸ್ಥಗೊಳಿಸಲು ಸಾಮರ್ಥ್ಯವನ್ನು ಒದಗಿಸುತ್ತದೆ. ಭಾರತೀಯ ವಾಯುಪಡೆಗೆ, ಪರ್ವತ ರಾಡಾರ್‌ಗಳ ಖರೀದಿ ಮತ್ತು ಸಕ್ಷಮ್/ಸ್ಪೈಡರ್ ಶಸ್ತ್ರಾಸ್ತ್ರ ವ್ಯವಸ್ಥೆಯ ಮೇಲ್ದರ್ಜೆಗಾಗಿ ಎಒಎನ್‌ಗೆ ಅವಕಾಶ ನೀಡಲಾಗಿದೆ. ಪರ್ವತ ರಾಡಾರ್‌ಗಳ ಖರೀದಿಯು ಪರ್ವತ ಪ್ರದೇಶದ ಗಡಿಗಳಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಾಯು ಕಣ್ಗಾವಲು ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಇಂಟಿಗ್ರೇಟೆಡ್ ಏರ್ ಕಮಾಂಡ್ ಮತ್ತು ಕಂಟ್ರೋಲ್ ಸಿಸ್ಟಮ್‌ನೊಂದಿಗೆ ಏಕೀಕರಣಕ್ಕಾಗಿ ಸಕ್ಷಮ್/ಸ್ಪೈಡರ್ ಸಿಸ್ಟಮ್‌ನ ಮೇಲ್ದರ್ಜೆಕರಣವು ವಾಯು ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ . ಮೂರು ಸೇವೆಗಳಿಗಾಗಿ ಮಧ್ಯಮ ಎತ್ತರದ ರಿಮೋಟ್ಲಿ ಪೈಲಟೆಡ್ ಏರ್‌ಕ್ರಾಫ್ಟ್ ಖರೀದಿಗೂ ಎಒಎನ್‌ಗೆ ಅವಕಾಶ ನೀಡಲಾಗಿದೆ. ಪ್ರಸ್ತಾವಿತ MALE RPA ಗಳು ಬಹು ಪೇಲೋಡ್‌ಗಳು ಮತ್ತು ಶಸ್ತ್ರಾಸ್ತ್ರಗಳನ್ನು ಸಾಗಿಸಬಲ್ಲವು ಮತ್ತು ದೀರ್ಘ ಸಹಿಷ್ಣುತೆಯ ಕಾರ್ಯಾಚರಣೆಗಳಿಗಾಗಿ ದೀರ್ಘ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಇದರ ಜೊತೆಗೆ, ಭಾರತೀಯ ವಾಯುಪಡೆಯ ಫ್ಲೀಟ್‌ನ C-17 ಮತ್ತು C-130J ವಿಮಾನಗಳ ಪೋಷಣೆಗಾಗಿ ಮತ್ತು S-400 ಲಾಂಗ್ ರೇಂಜ್ ಏರ್ ಡಿಫೆನ್ಸ್ ಕ್ಷಿಪಣಿ ವ್ಯವಸ್ಥೆಯ ಸಮಗ್ರ ವಾರ್ಷಿಕ ನಿರ್ವಹಣಾ ಒಪ್ಪಂದಕ್ಕಾಗಿ ಡಿಎಸಿ ಎಓಎನ್ ಅನ್ನು ಸಹ ನೀಡಿದೆ

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಸಹಕಾರಿ ಸಂಸ್ಥೆಗಳನ್ನು ಚೈತನ್ಯಶೀಲ ಮತ್ತು ಯಶಸ್ವಿ ವ್ಯಾಪಾರ ಘಟಕಗಳಾಗಿ ಪರಿವರ್ತಿಸಲು, ಸಹಕಾರ ಸಚಿವಾಲಯ ಬದ್ಧವಾಗಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. ೪ ವರ್ಷಗಳಲ್ಲಿ, ಎರಡು ಲಕ್ಷ ಬಹುಪಯೋಗಿ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯ ಗುರಿ ಸಾಧನೆಯ ನಿಟ್ಟಿನಲ್ಲಿ ಇಲ್ಲಿಯವರೆಗೆ, ೩೫ ಸಾವಿರಕ್ಕೂ ಹೆಚ್ಚು ಹೊಸ ಸಹಕಾರಿ ಸಂಘಗಳನ್ನು ರಚಿಸಲಾಗಿದೆ ಎಂದು ಅವರು ಹೇಳಿದರು. ಸಹಕಾರಿ ವಲಯವನ್ನು ಬಲಪಡಿಸುವ ಉಪಕ್ರಮಗಳ ಕುರಿತು, ನವದೆಹಲಿಯಲ್ಲಿ ನಿನ್ನೆ ನಡೆದ, ಸಹಕಾರ ಸಚಿವಾಲಯದ ಸಮಾಲೋಚನಾ ಸಮಿತಿಯ ಎರಡನೇ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭೂರಹಿತ ಬಡ ಜನರಿಗೆ, ಸಹಕಾರಿ ವಲಯವು ಸಮೃದ್ಧಿಯ ಹಾದಿಯನ್ನು ತೆರೆಯಬಹುದು ಎಂದ ಅವರು, ಕೃಷಿ ಮತ್ತು ರೈತರ ಸಮೃದ್ಧಿಗಾಗಿ ಮೂರು ರಾಷ್ಟ್ರೀಯ ಮಟ್ಟದ ಸಹಕಾರಿ ಸಂಘಗಳನ್ನು ರಚಿಸಲಾಗಿದೆ

ಎಂದು ಹೇಳಿದರು. ಸಮಾಲೋಚನಾ ಸಮಿತಿಯ ಎಲ್ಲಾ ಸದಸ್ಯರು, ತಮ್ಮ ರಾಜ್ಯಗಳಲ್ಲಿ ಡೈರಿ ವಲಯವನ್ನು ಬಲಪಡಿಸಲು, ಸಹಕಾರಿ ಸಂಸ್ಥೆಗಳಿಗೆ ಉತ್ತೇಜನ ನೀಡುವಂತೆ ತಿಳಿಸಿದರು.

**<><*<><>*><>**

ಕರ್ನಾಟಕದ ಬೆಂಗಳೂರಿನ ದೇವನಹಳ್ಳಿಯಲ್ಲಿ ನಡೆದ, ಇಂಡಿಯಾ ಇನ್ನೋವೇಶನ್ ಪಾರ್ಕ್ ಉದ್ಘಾಟನಾ ಸಮಾರಂಭದಲ್ಲಿ, ಗತಿ ಶಕ್ತಿ ವಿಶ್ವವಿದ್ಯಾಲಯ ಮತ್ತು SAP ಲ್ಯಾಬ್ಸ್ ಒಪ್ಪಂದಕ್ಕೆ ಸಹಿ ಹಾಕಿದವು. ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಪ್ರಮುಖ ಭಾಷಣ ಮಾಡಿದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್, ಎಸ್.ಎ.ಪಿ. ಲ್ಯಾಬ್ಸ್ ಇಂಡಿಯಾ ಇನ್ನೋವೇಶನ್ ಪಾರ್ಕ್, ಭಾರತೀಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಅಲ್ಲದೇ, ಪ್ರಧಾನಿ ನರೇಂದ್ರ ಮೋದಿಯವರ '೨೦೪೭ರ ವಿಕಸಿತ ಭಾರತ' ದೃಷ್ಟಿಕೋನವನ್ನು ಬಲಪಡಿಸಿದೆ ಎಂದು ಹೇಳಿದರು. ಈ ಕ್ಯಾಂಪಸ್, ಭಾರತದ ಪ್ರತಿಭೆ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯಲ್ಲಿ ಜಾಗತಿಕ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ, ವಿಶ್ವಾಸಾರ್ಹ ತಂತ್ರಜ್ಞಾನ ಪಾಲುದಾರನಾಗಿ, ಭಾರತದ ಸ್ಥಾನವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಅಶ್ವಿನಿ ವೈಷ್ಣವ್ ಹೇಳಿದರು.

**<><*<><>*><>**

ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಟೂರ್ನಮೆಂಟ್‌ನ ಮೂರನೇ ಆವೃತ್ತಿ, ಚೆನ್ನೈನಲ್ಲಿ ಇಂದು ಆರಂಭವಾಗಲಿದೆ. ಪಂದ್ಯಾವಳಿಯು, ಎರಡು ರೌಂಡ್-ರಾಬಿನ್ ಗುಂಪುಗಳನ್ನು ಒಳಗೊಂಡಿದ್ದು, ಮಾಸ್ಟರ್ಸ್ ಮತ್ತು ಚಾಲೆಂಜರ್ಸ್ ಎಂಬ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ: ಇಂದು ನಡೆಯಲಿರುವ ಮಾಸ್ಟರ್ಸ್‌ನ ಮೊದಲ ಸುತ್ತಿನ ಪಂದ್ಯಗಳಲ್ಲಿ, ಭಾರತೀಯ ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಎರಿಗೈಸಿ, ಅಮೇರಿಕದ ಅವಾಂಡರ್ ಲಿಯಾಂಗ್ ಅವರನ್ನು ಎದುರಿಸಲಿದ್ದಾರೆ ಮತ್ತೊಂದು ಪಂದ್ಯದಲ್ಲಿ ವಿದಿತ್ ಗುಜರಾತಿ, ಡಚ್ ಆಟಗಾರ್ತಿ ಜೋರ್ಡೆನ್ ವ್ಯಾನ್ ಫಾರೆಸ್ಟ್ ಅವರನ್ನು ಮುಖಾಮುಖಿಯಾಗಲಿದ್ದಾರೆ. ಚಾಲೆಂಜರ್ಸ್ ವಿಭಾಗದಲ್ಲಿ ನಡೆಯಲಿರುವ ಅಖಿಲ ಭಾರತೀಯ ಸ್ಪರ್ಧೆಯಲ್ಲಿ ಹರಿಕಾ ದ್ರೋಣವಲ್ಲಿ ಮತ್ತು ವೈಶಾಲಿ ರಮೇಶ್‌ಬಾಬು ಭಾಗಿಯಾಗಲಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**